ಅನ್ನುವುದೂ ಗೊತ್ತು. ಆದರೆ ನನಗೆ ಒಂದು ವಿಶ್ವಾಸವಿತ್ತು ಕಲಿತವರಾದ ನೀವು ಮಾನವೀಯತೆಗಿಂತ ದೊಡ್ಡ ಧರ್ಮ ಯಾವುದೂ ಇಲ್ಲ ಎಂದು ನಂಬಿಕೊಂಡವರು ಎಂದು. ಅದನ್ನೆ ಇವರಿಗೆ ಹೇಳಿ ಇಲ್ಲಿಗೆ ಬರುವ ಧೈರ್ಯ ತೆಗೆದುಕೊಂಡೆ' ಎಂದು ಆರಂಭಿಸಿದವಳು ಯಾವಾಗಿನ ತನ್ನ ಸ್ವಭಾವದಂತೆ ನಿರರ್ಗಳವಾಗಿ ಮಾತಾಡುತ್ತ ವಾತಾವರಣದ ಬಿಗಿ ಸಡಿಲಿಸಿದಳು. ಭಟ್ಟರೂ ನಿಧಾನವಾಗಿ ತನ್ನನ್ನ ಸಮಾಧಾನಿಸಿಕೊಳ್ಳುತ್ತ, ಹೇಳಬೇಕಾದ ಆಕ್ಷೇಪಗಳನ್ನ ಸ್ಪಷ್ಟವಾಗಿ ನಿರೂಪಿಸಿದರು. 'ನಿಜ, ಅಪ್ಪ, ಮುಖತಃ ನಿಮ್ಮೊಂದಿಗೆ ಈ ವಿಷಯ ಮಾತಾಡಬೇಕಿತ್ತು. ಆದರೆ ಆಗಿನ ಸನ್ನಿವೇಶ ಸಂದರ್ಭ ನನಗೆ ಅವಕಾಶ ಕೊಡಲಿಲ್ಲ. ಈಗ ಅನ್ನಿಸುತ್ತಿದೆ – ನಿಮ್ಮೊಂದಿಗೆ ಹೇಳಿ ಹೋಗಬೇಕಾಗಿತ್ತು, ಪತ್ರ ಬರೆದಿಟ್ಟು ಹೋಗುವುದಲ್ಲ ಎಂದು. ಅದೊಂದು ತಪ್ಪು ನನ್ನಿಂದ ಆಗಿದೆ. ಆದರೆ ಹಾಗೆ ಇವರೊಟ್ಟಿಗೆ ಹೋಗಿದ್ದಕ್ಕೆ ನನಗೆ ಖಂಡಿತಕ್ಕೂ ಇವತ್ತಿನವರೆಗೆ ಪಶ್ಚಾತ್ತಾಪವಿಲ್ಲ ಅಪ್ಪ. ಇವರ ಸ್ವಭಾವವನ್ನ ಅವತ್ತೇ ಪೂರಾ ಅರ್ಥ ಮಾಡಿಕೊಂಡು, ಮಾತಾಡಿಕೊಂಡೇ ಹೋಗಿದ್ದೆ. ಮತ್ತೆ ಮೂರು ವರ್ಷ ಕಳೆದ ಮೇಲೆ ಯಾಕೆ ಬಂದೆ ಅನ್ನುತ್ತೀರೇನೊ. ಯಾಕೆಂದರೆ ನಾನು ನಿಮ್ಮನ್ನ ಯಾವತ್ತೂ ತೊರೆದವಳೇ ಅಲ್ಲ. ನನ್ನ ಮುಂದಿನ ಬದುಕು ಇವರೊಂದಿಗೇ ಎಂದು ನಾನು ನಿರ್ಧರಿಸಿದೆನೇ ಹೊರತಾಗಿ ನಿಮ್ಮನ್ನ ತೊರೆಯುವ ಯೋಚನೆಯನ್ನ ಮಾಡಿದವಳಲ್ಲ. ಹಾಗೆ ಹೋದದ್ದು ನಮ್ಮನ್ನ ತೊರೆದಂತೆ ಎಂದು ನೀವನ್ನುತ್ತೀರಾದರೆ, ಇದೋ ಮರಳಿ ಹೊರಟೆ.'

'ಹೇಗೂ ಬಂದಿದ್ದೀರಿ, ಊಟ ಮಾಡಿಕೊಂಡು ಹೋಗಿ. ಬೇಡ, ಈ ರಾತ್ರಿ ಮಳೆಗಾಳಿಯಲ್ಲಿ ಈ ಪುಟ್ಟ ಮಗುವನ್ನ ಕಟ್ಟಿಕೊಂಡು ಎಲ್ಲಿಗೆ ಹೋಗುತ್ತೀರಿ, ಮಲಗೆದ್ದು ಬೆಳಿಗ್ಗೆ ಹೋಗಿ' ಭಟ್ಟರೆಂದರು ಮುಗುಮ್ಮಾಗಿ. ಮಲಗಿದ್ದ ಮಗು ಒಮ್ಮೆ ಮೈಮುರಿದು ಹೊರಳಿತು. 'ಎಷ್ಟು ವರ್ಷನೆ?' ರುಕ್ಮಿಣಿ ಕೇಳಿದಳು. 'ಒಂದು ವರ್ಷವಮ್ಮ. ಆಗಲೇ ನಡೆಯಲಿಕ್ಕು ಕಲಿತಿದ್ದಾನೆ. ಕಾರು ಹತ್ತಿದ ಕೂಡಲೆ ನಿದ್ದೆ ಮಾಡಿದವನು ಇದೆ ಈಗ ಏಳುತ್ತಿದ್ದಾನೆ' ಎನ್ನುತ್ತ ಕಣ್ಣು ತೆರೆದು ಸುತ್ತ ಪಿಳಿ ಪಿಳಿ ನೋಡತೊಡಗಿದ ಮಗನಿಗೆ, 'ಇದೆ ನಿನ್ನ ಅಜ್ಜ ಅಜ್ಜಿ ಮನೆಗೆ ಬಂದಿದ್ದೀಯ, ಏಳು' ಎನ್ನುತ್ತ ಅವನನ್ನೆತ್ತಿ ತಾಯಿಗೆ ಕೊಡಹೋದಳು. ಕ್ಷಣ ಕಾಲ ಹಿಂಜರಿದ ರುಕ್ಮಿಣಿಯ ಕೈ ಅಯಾಚಿತವಾಗಿಯೇ ನೀಡಲ್ಪಟ್ಟು ಕೈಗೆ ಮಗು ಬಂದಾಗ ಮನಸ್ಸು ಉಲ್ಲಸಿತವಾಯಿತು. 'ಮೂಗು ಕಣ್ಣು ಎಲ್ಲ ಅಪ್ಪನ ಹಾಗೇ ಅಲ್ಲವೇನಮ್ಮ' ಎಂದ ಮಗಳ ಮಾತು ಅವರಿಗೂ ಹೌದೆನ್ನಿಸಿತು. ಮಗಳು ತನಗೇ ಮಗುವನ್ನ ಮೊದಲು ಕೊಡಬೇಕಿತ್ತು ಎಂದು ಅರೆಕ್ಷಣ ಅನ್ನಿಸಿದರೂ ಭಟ್ಟರು ಅದನ್ನ ಹೇಳಲಾಗದೆ ಮಗುವನ್ನೇ ದಿಟ್ಟಿಸಿದರು, ಮಗಳು ಹೇಳಿದ ಮಾತು ಹೌದೇ ಎನ್ನುವುದನ್ನ ಪರೀಕ್ಷಿಸುವವರಂತೆ. ಅದನ್ನ ಅರ್ಥ ಮಾಡಿಕೊಂಡವಳಂತೆ ರುಕ್ಮಿಣಿ ಭಟ್ಟರ ಕೈಗೆ ಮಗುವನ್ನ ಕೊಟ್ಟು, 'ನಾನು ಊಟಕ್ಕೆ ತಯಾರಿ ಮಾಡುತ್ತೇನೆ, ಒಳಗೆ ಅವಳೊಬ್ಬಳೇ' ಎನ್ನುತ್ತ ಒಳಹೋಗುವಾಗ ಊಟಕ್ಕೆ ಏನು ಪದಾರ್ಥ ಮಾಡುವುದು ಎನ್ನುವುದಷ್ಟೆ ಅವರ ಯೋಚನೆಯಾಗಿತ್ತು. ತಾವೇನು ಮಾಂಸಾಹಾರ ಮಾಡುವವರಲ್ಲ – ವಿಶೇಷ ಅಡುಗೆ ಅಂತ ಚಿಕನ್‌ಪಕನ್ ಮಾಡುವುದಕ್ಕೆ. ಆದರೆ ತಮ್ಮ ಮನೆಗೆ ಮುಸ್ಲಿಮರು ಬರುವುದೇನೂ ಹೊಸತಲ್ಲವಲ್ಲ. ಇವರು ಉದ್ಯೋಗದಲ್ಲಿರುವಾಗ ಇವರ ಸಹೋದ್ಯೋಗಿ ಖಾನರು ತಿಂಗಳಿಗೊಮ್ಮೆಯಾದರು ಬಂದು 'ವೈನಿ, ನಿಮ್ಮನೆ ವೆಜ್ ಬಿರಿಯಾನಿ ತಿನ್ನೋದಕ್ಕೆ ಬಂದೆ' ಎನ್ನುತ್ತ ಉಂಡು ಹೋಗುತ್ತಿರಲಿಲ್ಲವೆ? ಈಗಲೂ ಹಾಗೇ ಅಂದುಕೊಂಡರಾಯಿತು. ಸರಿ, ಬೀನ್ಸು, ಕ್ಯಾರೆಟ್ಟು ಎಲ್ಲ ಇದೆ, ವೆಜ್‌ಬಿರಿಯಾನೀನೇ ಮಾಡಿದರಾಯಿತು ಎಂದುಕೊಂಡಳು. ಕಾಕತಾಳಿಯವಾಗಿ ಭಟ್ಟರೂ ಖಾನನ ಬಗ್ಗೆಯೇ ಯೋಚಿಸುತ್ತಿದ್ದರು. ಆದರೆ ಇವನು ಅಳಿಯ... ಅಲ್ಲ, ಅಲ್ಲ, ಮಗಳ ಗಂಡ. ಆದರೇನಾಯಿತು...

ರೋಹಿಣಿ, ಚೀಲದಲ್ಲಿರೋ ಹಣ್ಣುಗಳನ್ನ, ಸ್ವೀಟ್ಸ್‌ನ ತೆಗೆದುಕೊಡಲಿಲ್ಲ. ರಫೀಕ ಹೆಂಡತಿಗೆ ನೆನಪಿಸಿದ. ಭಟ್ಟರಿಗೆ ವಿಸ್ಮಯವಾಗಿ ಮಗಳತ್ತ ನೋಡಿದರು. ಸ್ವೀಟ್ಸ್ ಬಗ್ಗೆ ಕೇಳಿದ್ದಕ್ಕಲ್ಲ, ಈತ ರೋಹಿಣಿ